# ಶ್ರೀ ಸುತ್ತೂರು ಮಠ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 241

**16 ಏಪ್ರಿಲ್ 2022 * ಶನಿವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

## ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

ವೀಣಾವಾದನ



ವಿದುಷಿ ವೈ.ಜಿ. ಶ್ರೀಲತಾ ನಿಕ್ಷಿತ್



ವಿದ್ವಾನ್ ಪುತ್ತೂರ್ ಟಿ. ನಿಕ್ಷಿತ್

ಮೃದಂಗ



ವಿದ್ವಾನ್ ಶಮಿತ್ ಎಸ್. ಗೌಡ

ಘಟಂ

**ಸರ್ವರಿಗೂ ಹಾರ್ದಿಕ ಸುಸ್ವಾಗತ**

**ವಿದುಷಿ ವೈ.ಜಿ. ಶ್ರೀಲತಾ ನಿಕ್ಷಿತ್‌ರವರು** ಉದಯೋನ್ಮುಖ ವೀಣಾವಾದಕರು. ತಾಯಿ ವಿದುಷಿ ಪರಿಮಳರವರ ಬಳಿ ಹಾಡುಗಾರಿಕೆ ಮತ್ತು ವೀಣೆಯ ಪ್ರಾರಂಭಿಕ ಶಿಕ್ಷಣ ಪಡೆದಿದ್ದು, ಅನಂತರ ಖ್ಯಾತ ಕಲಾವಿದರಾದ ಗಾನಕಲಾಭೂಷಣ ಡಾ. ಶ್ರೀಮತಿ ಸುಮಾ ಸುಧೀಂದ್ರರವರ ಬಳಿ ವೀಣಾವಾದನದ ಕಲಿಕೆಯನ್ನು ಮುಂದುವರಿಸಿದರು. ಪ್ರಸ್ತುತ ಲಾಲ್‌ಗುಡಿ ಪರಂಪರೆಯ ಶ್ರೀಮತಿ ಪದ್ಮಾವತಿ ಅನಂತಗೋಪಾಲನ್ ಮತ್ತು ಸಂಗೀತ ಕಲಾ ಆಚಾರ್ಯ ವಿದುಷಿ ನೀಲಾ ರಾಮಗೋಪಾಲ್‌ರವರ ಬಳಿ ಶಿಷ್ಯವೃತ್ತಿ ಮುಂದುವರಿಸಿದ್ದಾರೆ.

ವಿದುಷಿ ಶ್ರೀಲತಾ ನಿಕ್ಷಿತ್‌ರವರು ಬೆಂಗಳೂರು ಜೈನ್ ವಿಶ್ವವಿದ್ಯಾನಿಲಯದಲ್ಲಿ ಎಂಟೆಕ್ (ಡಿಜಿಟಲ್ ಸಿಗ್ನಲ್ ಪ್ರೊಸೆಸಿಂಗ್) ಪದವೀಧರು. ಡಿಆರ್‌ಡಿಓ ಸಂಸ್ಥೆಯಲ್ಲಿ ಇವರು ಸಿದ್ಧಪಡಿಸಿದ ಯೋಜನಾ ವರದಿ ಅಂತಾರಾಷ್ಟ್ರೀಯ ಜರ್ನಲ್‌ನಲ್ಲಿ ಪ್ರಕಟವಾಗಿದೆ. ನ್ಯಾಷನಲ್ ಏರೋನಾಟಿಕಲ್ ಲ್ಯಾಬೋರೇಟರಿಯಲ್ಲಿದ್ದ ಉನ್ನತ ಹುದ್ದೆಯನ್ನು ತ್ಯಜಿಸಿ ಸಂಗೀತಕ್ಕಾಗಿಯೇ ಜೀವನವನ್ನು ಮುಡಿಪಾಗಿಟ್ಟಿರುವ ಅಪರೂಪದ ಕಲಾರಾಧಕರು. ಆಕಾಶವಾಣಿ ಬಿ–ಹೈ ಶ್ರೇಣಿ ಕಲಾವಿದರು. ಎಂ.ಎಸ್. ಸುಬ್ಬಲಕ್ಷ್ಮಿ ವ್ಯಾಸಂಗ ವೇತನ, ಕರ್ನಾಟಕ ಸಂಗೀತ ನೃತ್ಯ ಅಕ್ಯಾಡೆಮಿಯ ವಿದ್ಯಾರ್ಥಿವೇತನಗಳಿಗೆ ಭಾಜನರು. ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ಒರಿಸ್ಸಾ, ಮಹಾರಾಷ್ಟ್ರ, ತೆಲಂಗಾಣ ಮುಂತಾದ ರಾಜ್ಯಗಳಲ್ಲಿ ಕಾರ್ಯಕ್ರಮ ಪ್ರಸ್ತುತಪಡಿಸಿದ್ದಾರೆ. ಹಲವಾರು ಸಿಡಿ ಆಲ್ಬಂಗಳನ್ನು ಹೊರತಂದಿದ್ದಾರೆ. ಇವರಿಗೆ ಅಸಂಖ್ಯಾತ ಪ್ರಶಸ್ತಿ, ಪುರಸ್ಕಾರಗಳು ಲಭಿಸಿವೆ.

**ವಿದ್ವಾನ್ ಪುತ್ತೂರ್ ಟಿ. ನಿಕ್ಷಿತ್‌ರವರು** ಬಿಬಿಎಂ, ಬಿಎಸ್‌ಸಿ ಮತ್ತು ವಿಷುವಲ್ ಕಮ್ಯುನಿಕೇಶನ್ನಿನಲ್ಲಿ ಸ್ನಾತಕೋತ್ತರ ಪದವೀಧರರು. ಅಭಿಜಾತ ಕಲಾವಿದರು. ವಿದ್ವಾನ್ ಕುಕ್ಕಿಲ ಶಂಕರಭಟ್ಟರ ಬಳಿ ಗುರುಕುಲ ಪದ್ಧತಿಯಲ್ಲಿ ಅಭ್ಯಾಸಮಾಡಿ ಮೃದಂಗ ವಾದನವನ್ನು ಕರಗತ ಮಾಡಿಕೊಂಡಿದ್ದಾರೆ. ವಿದುಷಿ ವೈ.ಜಿ. ಶ್ರೀಲತಾ ರವರ ಪತಿಯೂ ಹೌದು. ರಾಷ್ಟ್ರಮಟ್ಟದ ಖ್ಯಾತಿಯ ಹಲವಾರು ಕಲಾವಿದರಿಗೆ ಮೃದಂಗ ಪಕ್ಕವಾದ್ಯ ಸಹಕಾರ ನೀಡಿದ್ದಾರೆ. ಇವರಿಗೆ ಹಲವಾರು ಪ್ರಶಸ್ತಿ, ಪುರಸ್ಕಾರಗಳು ಸಂದಿವೆ. “ನಾದತರಂಗ” ತಂಡದ ಮೂಲಕ ಜುಗಲ್ಬಂದಿ ಮತ್ತು ಪತ್ಯ–ಆಧಾರಿತ (Theme-Based) ಕಚೇರಿಗಳನ್ನು ಪ್ರತಿಷ್ಠಿತ ವೇದಿಕೆಗಳಲ್ಲಿ ನೀಡಿರುತ್ತಾರೆ.

**ವಿದ್ವಾನ್ ಶಮಿತ್ ಎಸ್. ಗೌಡರವರು** ಖ್ಯಾತ ವಿದ್ವಾಂಸ ಶ್ರೀ ಎಚ್.ಎಲ್. ಶಿವಶಂಕರಸ್ವಾಮಿಯವರಿಂದ ಮೃದಂಗವನ್ನು ಮತ್ತು ಸುಪ್ರಸಿದ್ಧ ವಿದ್ವಾಂಸ ಶ್ರೀ ಗಿರಿಧರ ಉಡುಪರಿಂದ ಘಟಂ ವಾದನವನ್ನು ಅಭ್ಯಾಸ ಮಾಡಿದ್ದಾರೆ. ಕರ್ನಾಟಕ ಸಂಗೀತ ನೃತ್ಯ ಅಕ್ಯಾಡೆಮಿಯ ಶಿಷ್ಯವೇತನ ಪಡೆದಿದ್ದಾರೆ. "ಅಸಾಧಾರಣ ಪ್ರತಿಭಾ ಪುರಸ್ಕಾರ" ಪಡೆದಿರುತ್ತಾರೆ.

# ಬೆಳದಿಂಗಳ ಸಂಗೀತ 242

**16 ಮೇ 2022**

## ದ್ವಂದ್ವ ಗಾಯನ

ವಿದುಷಿ ಅಶ್ವಿನಿ ಕೋಳಿಕ್ಕಜೆ
ವಿದುಷಿ ಡಾ. ಮೇಧಾಭಟ್

**ವಯೊಲಿನ್**

ವಿದುಷಿ ಸಿ.ವಿ. ಶ್ರುತಿ

**ಮೃದಂಗ**

ವಿದ್ವಾನ್ ವೈ.ಪಿ. ವಿಕ್ರಂ ಭಾರದ್ವಾಜ್

**ಮೋರ್ಚಿಂಗ್**

ವಿದ್ವಾನ್ ವಿ.ಎಸ್. ರಮೇಶ್

---

**ಫೋನ್: 0821–2548221, 2548223 * ಇಮೇಲ್: sutturmath@jssonline.org**